ಅಭಿಯಾಚನೆ ಕ್ರಮಾಂಕ 25—ರಾಜ್ಯದ ಅಬಕಾರಿ

''ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1991ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ರಾಜ್ಯದ ಅಬಕಾರಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ಪೆಚ್ಚಿಪನ್ನು ಪಡಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 12,44,99,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು.''

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಸದಸ್ಯರಾದ ಶಿವರಾಮೇಗೌಡರು ಒಂದು ವಿಚಾರದಲ್ಲಿ ಹೇಳಿಕೆ ಕೊಡಬೇಕೆಂದು ಕೇಳಿದ್ದರು. ನಾನೂ ಕೂಡ ಹೇಳಿಕೆ ಕೊಡುತ್ತೇನೆಂದು ಆಶ್ವಾಸನೆ ಕೊಟ್ಟಿದ್ದೆ. ತಾವು ಅನುಮತಿ ಕೊಟ್ಟರೆ, ಹೇಳಿಕೆಯನ್ನು ಮಾಡುತ್ತೇನೆ.

ಅಧ್ಯಕ್ಷರು.—ಮಾನ್ಯ ಶಿವರಾಮೇಗೌಡರೇ ಇಲ್ಲ.

SRI M. VEERAPPA MOILY.—Tomorrow, why should I be held responsible ?

MR. SPEAKER.—The hon'ble Member is not there. I will not certainly hold you responsible. If he was interested, he should have been present and ready in the House.

SRI M. VEERAPPA MOILY.—Anyway, I am ready with the statement.

ಪ್ರಕಟಣೆ

ಅಧ್ಯಕ್ಷರು.—ಈಗ ಒಂದು ಪ್ರಕಟಣೆ ಇದೆ, ಸದನದ ಕಾರ್ಯಕಲಾಪಗಳ ಸಮಿತಿಯು ಸಭೆ ನಡೆದು ಅದರ ತೀರ್ಮಾನಗಳು ಈ ಕೆಳಕಂಡಂತೆ ಇದೆ.

ಗ್ರಾಮೀಣ ಅಭಿವೃದ್ಧಿ, ಪಂಚಾಯತ್ ರಾಜ್ ಅರಣ್ಯ, ಪಶುಸಂಗೋಪನೆ, ವ್ಯವಸಾಯ, ತೋಟಗಾರಿಕೆ ಮತ್ತು ಮುಖ್ಯಮಂತ್ರಿಯವರ ಖಾತೆಗೆ ಸಂಬಂಧಪಟ್ಟ ಬೇಡಿಕೆಗಳನ್ನು ಒಟ್ಟಿಗೆ ೧೩ ಮತ್ತು ೧೪ನೇ ತಾರೀಖಿನಂದು ಎರಡು ದಿವಸ ಚರ್ಚೆ ಮಾಡಿ, ರೂರಲ್ ಡೆವಲಪ್‌ಮೆಂಟ್ ಮತ್ತು ಪಂಚಾಯತ್‌ರಾಜ್, ಅರಣ್ಯ ಮತ್ತು ಪಶುಸಂಗೋಪನೆ ಹಾಗೂ ವ್ಯವಸಾಯ ಮತ್ತು ತೋಟಗಾರಿಕೆ ಮಂತ್ರಿಗಳು ಚರ್ಚೆಗೆ ೧೪ನೇ ತಾರೀಖು ಉತ್ತರ ಕೊಡುತ್ತಾರೆ.

ಮುಖ್ಯಮಂತ್ರಿಗಳು ಅವರ ಇಲಾಖೆಗಳ ಮೇಲಿನ ಚರ್ಚೆಗೆ ೧೬ನೇ ತಾರೀಖು ಸೋಮವಾರ ಉತ್ತರ ಕೊಡುತ್ತಾರೆ.

ಅಪ್ರೋಪ್ರಿಯೇಷನ್ ಬಿಲ್ಲನ್ನೂ ಸದನ ೧೬ನೇ ತಾರೀಖು ಕೈಗೆ ತೆಗೆದುಕೊಳ್ಳುತ್ತದೆ.

ಈಗ ಮಾನ್ಯ ಸಚಿವರುಗಳು ತಮ್ಮ ತಮ್ಮ ಬೇಡಿಕೆಗಳನ್ನು ಮಂಡಿಸಬಹುದು.

ವಿತ್ತೀಯ ಕಾರ್ಯಕಲಾಪಗಳು

೧೯೯೦-೯೧ನೇ ಸಾಲಿನ ಬೇಡಿಕೆಗಳ ಮಂಡನೆ.

ಗ್ರಾಮೀಣಾಭಿವೃದ್ಧಿ, ಪಂಚಾಯತ್‌ರಾಜ್, ಖಾರ್ತೆ, ಅರಣ್ಯ ಪಶುಸಂಗೋಪನೆ, ವ್ಯವಸಾಯ, ತೋಟಗಾರಿಕೆ. ಪೋಲೀಸ್, ಜೈಲು, ಚುನಾವಣೆಗಳು, ರಾಜ್ಯಪಾಲರು ಮಂತ್ರಿಗಳು ಮಂತ್ರಿ ಲೋಕಸೇವಾ ಆಯೋಗ, ಸಚಿವಾಲಯ ಇತ್ಯಾದಿ ಇಲಾಖೆಗಳು. ಬೇಡಿಕೆಗಳ ಕ್ರ. ಸಂ. ೨೯, ೫೭, ೫೮, ೪, ೨೪, ೧, ೨, ೩, ೨೭, ೨೮, ೩೯, ೪೦, ೪೧, ೪೨, ೪೩.

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಈ ಕೆಳಕಂಡ ಬೇಡಿಕೆಗಳನ್ನು ಸಭೆಯ ಅನುಮೋದನೆಗಾಗಿ ಮಂಡಿಸುತ್ತೇನೆ.